

# ರಾಶಿವ್ಯೂಹದಲಿ ಅಡಗಿದ ಕನ್ಯೆಯ ಸೌಂದರ್ಯ

ಕನ್ಯೆಗೆ ಐದು ಜಂಘೆಗಳು ಕನ್ಯೆಗೆ ಆರು ಕುಚಗಳು ನೋಡಾ
ಕನ್ಯೆಗೆ ನಾಲ್ಕು ಹುಬ್ಬುಗಳು ಕನ್ಯೆಗೆ ಏಳು ವಿಶಾಲ ನಯನಗಳು
ಕನ್ಯೆಗೆ ದ್ವಾದಶ ನುಲಿಕಟಿ ಇರುವ ಸುಲಕ್ಷಣಾಢ್ಯೆಯಾ
ಕನ್ಯೆಗೆ ನಿನಗೆ ಇನ್ನು ಆಗಬೇಕು ಮದುವೆ ಕಸ್ತೂರಿ ರಂಗನಾಯಕ

ಇದು ಅನಾಮಿಕ ತೆಲುಗು ಕವಿಯ ಚಾಟುಪದ್ಯದ ಕನ್ನಡರೂಪ. ಇದು ಚತುರೋಕ್ತಿಯ ಪದ್ಯವೆಂದು ಸುಲಭವಾಗಿ ಹೇಳಬಹುದು. ಆದರೆ ಇದು ಅಷ್ಟೇ ಅಲ್ಲ. ಕವಿ ಇಲ್ಲಿ ಕನ್ಯೆಯೊಬ್ಬಳ ಅನುಪಮ ಸೌಂದರ್ಯವನ್ನು ತನ್ನ ಪ್ರತಿಭೆಯ ಚಾತುರ್ಯದ ಮೂಲಕ ಅರಳಿಸಿದ್ದಾನೆ. ಕವಿಗಳು ತಮ್ಮ ಕಾವ್ಯಗಳಲ್ಲಿ ಉತ್ಸಾಹದಿಂದ ಜವ್ವನೆಯ ಸೌಂದರ್ಯವನ್ನು ವರ್ಣಿಸುವುದು ಎಂದಿನಿಂದ ನಡೆದೇ ಇದೆ. ಉಪಮೆಗಳ ಮೂಲಕ ಸೌಂದರ್ಯವನ್ನು ವರ್ಣಿಸುವುದು ಸಾಮಾನ್ಯ. ಆದರೆ, ಇಲ್ಲಿನ ಕವಿ ವರ್ಣನೆಯಂತೆ ಸುಂದರಿಯೊಬ್ಬಳನ್ನು ಊಹಿಕೊಂಡರೆ ಬೆಚ್ಚಿಬೀಳುವುದಂತೂ ನಿಜ.